<u>ಅಸಲು ದಾವಾಃ- 114/2020</u> ಪಿ.ಡಬ್ಲ್ಯೂಃ- 2

ದಿನಾಂಕಃ 23.07.2026 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ.ಕೆ ಹೆಚ್ ಎನ್ ವಕೀಲರಿಂದ</u>

ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಅಂಶಗಳು ಹಾಗೂ ಅದನ್ನು ಯಾರು ಬರೆಸಿರುತ್ತಾರೆ ಎಂದರೆ ಗೊತ್ತಿಲ್ಲ. ಯಾವ ಆಸ್ತಿಗಳಿಗೆ ಸಂಬಂಧಿಸಿದಂತೆ ವಾದಿ ದಾವೆ ಹಾಕಿರುತ್ತಾರೆ ಎಂದರೆ ಗೊತ್ತಿಲ್ಲ. ನಾನು ಯಾವ ಊರಿನಲ್ಲಿ ವಾಸವಿದ್ದೇನೆ ಎಂದರೆ ಮಾಚಗೊಂಡನಹಳ್ಳಿ . ವಾದಿಯು ನನಗೆ ಏನಾಗಬೇಕು ಎಂದರೆ ಗ್ರಾಮಸ್ಥರು ಅಷ್ಟೇ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ಯಾರ ಹೆಸರಿಗೆ ಇದ್ದಾವೆ ಎಂದರೆ ಸಣ್ಣಹಾಲಪ್ಪರವರ ಹೆಸರಿಗೆ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ಸಣ್ಣಹಾಲಪ್ಪರವರಿಗೆ ಹೇಗೆ ಬಂದಿರುತ್ತವೆ ಎಂದರೆ ಗೊತ್ತಿಲ್ಲ. ದಾವಾ ಎ ಶೆಡ್ಯೂಲ್ ಆಸ್ತಿಗಳು ಸಣ್ಣ ಹಾಲಪ್ಪರವರಿಗೆ ಮಂಜೂರಾದ ಆಸ್ತಿಗಳು ಎಂದರೆ ಇರಬಹುದು ಎಂದು ನುಡಿಯುತ್ತಾರೆ.

ಸಣ್ಣಹಾಲಪ್ಪರವರಿಗೆ ಸಂಬಂಧಿಸಿದ ಸರ್ವೆ ನಂ.68 ರಲ್ಲಿ 1 ಎಕರೆ 18 ಗುಂಟೆ,ಸರ್ವೆ ನಂ.74/1 ರಲ್ಲಿ 1 ಎಕರೆ 31 ಗುಂಟೆ, ಸರ್ವೆ ನಂ.74/2 ರಲ್ಲಿ 1 ಎಕರೆ 31 ಗುಂಟೆ, ಸರ್ವೆ ನಂ.129/4 ರಲ್ಲಿ 39 ಗುಂಟೆ ಜಮೀನು ಹಾಗೂ ಮನೆಯ ಸ್ವತ್ತುಗಳಾದ ಆಸ್ತಿ ನಂಬರ್ 87/ಎ, 90 ಮತ್ತು 95 ರ ಆಸ್ತಿಗಳನ್ನು ಈ ದಾವೆಗೆ ಸೇರಿಸಿಲ್ಲ ಎಂದರೆ ಗೊತ್ತಿಲ್ಲ. ದಾವಾ ವಿಚಾರಗಳು ಗೊತ್ತಿಲ್ಲದೇ ಇದ್ದರೂ ಸಹ ವಾದಿಗೆ ಅನುಕೂಲ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲುಃ–</u> ಉಳಿದ ಪ್ರತಿವಾದಿಗಳ ಪಾಟೀ ಸವಾಲಿಗೆ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ